(*d*) the number of people wounded and number of people died in the disturbances;

(*e*) the estimated loss of property;

(*f*) the number of persons arrested and the number of persons charge sheeted?

Sri D. DEVARAJ URS (Chief Minister).—

(*a*) Yes.

(*b*) Shops and houses of members of minority community as also the members of other communities were burnt during these disturbances.

(*c*) 344.

(*d*) Number of persons wounded : 156 (including Police and Home Guards).

Number of persons died : Two.

(*e*) Rs. 3,29,725.

(*f*) Number of persons arrested : 140.

Number of persons charge sheeted : 31.

Notice of Adjournment Motion *Re* : Strike at the Ruby Rubber Works, Bangalore.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ನಾನು ಇವತ್ತು ಬೆಳಿಗ್ಗೆ ತಮಗೆ ಒಂದು ಅಡ್ಜರ್ನ್‌ಮೆಂಟ್‌ಮೋಷನ್ ಕಳುಹಿಸಿದ್ದೆ. ನಿನ್ನೆ ದಿವಸ ಒಂದು ಘಟನೆ ಬೆಂಗಳೂರಿನಲ್ಲಿ ನಡೆದಿದೆ. ರೂಬಿ ರಬ್ಬರ್ ವರ್ಕ್ಸ್ ಫ್ಯಾಕ್ಟರಿಯಲ್ಲಿ ಸುಮಾರು 200-250 ಜನರು ಕೆಲಸಮಾಡುತ್ತಿದ್ದಾರೆ. ಅಲ್ಲಿ ಐದಾರು ದಿವಸಗಳಿಂದಲೂ ಸ್ಟ್ರೈಕ್ ಮಾಡಿದ್ದಾರೆ. ಫ್ಯಾಕ್ಟರಿಯೊಳಗೆ ನಿನ್ನೆ ದಿವಸ ಅಲ್ಲಿನ ಸಾಮಾನುಗಳನ್ನು ಮಾಲೀಕ ಲಾರಿಯಲ್ಲಿ ಸಾಗಿಸಬೇಕೆಂದು ಯೋಚನೆ ಮಾಡಿ ಪೋಲೀಸ್‌ನವರನ್ನು ಸಹಾಯ ಮಾಡಬೇಕೆಂದು ಕೇಳಿಕೊಂಡನು. ಆದರಂತೆ ಪೋಲೀಸಿನವರು ಈ ವಿಚಾರದಲ್ಲಿ ಕುಮ್ಮಕ್ಕು ಕೊಟ್ಟು ಅಲ್ಲಿದ್ದವರಿಗೆ ಲಾಠಿ ಚಾರ್ಜ್ ಮಾಡಿ, ಅಲ್ಲಿದ್ದ ಚೆಂಟನ್ನು ಕಿತ್ತುಕೊಂಡು ಹೋಗಿ ಅನೇಕರಿಗೆ ಹೊಡೆದು ಸುಮಾರು 20 ಜನರಿಗೆ ಗಾಯಗಳಾಗಿವೆ. ಅವರಲ್ಲಿ ಕೆಲವರನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ಶಾಂತರೀತಿಯಿಂದ ಇದ್ದಂಥ ಕಾರ್ಮಿಕರ ಮೇಲೆ ಪೋಲೀಸಿನವರು ಮಾಲೀಕನಿಗೆ ಕುಮ್ಮಕ್ಕು ಕೊಟ್ಟು ಹೊಡಿಸಿದರು. ಇದರಿಂದ ವಿರೋಧಾಭಾಸವುಂಟಾಗಿದೆ. ಶ್ರೀಮಾನ್ ಅಜೀಜ್ ಸೇಟ್ ಅವರು ಇಂದು ಪೋಲೀಸಿನವರ ನೀತಿಯ ಬಗ್ಗೆ ಮಾತನಾಡುತ್ತಾ ಕೈಗಾರಿಕೆ ಕ್ಷೇತ್ರದಲ್ಲಿ ಇಂತಹ ವೈಷಮ್ಯಗಳು ತಲೆದೋರಿದಾಗ ಕಾರ್ಮಿಕರು ಹಾಗೂ ಮಾಲೀಕರು ಶಾಂತ ರೀತಿಯಲ್ಲಿ ವರ್ತಿಸಬೇಕೆಂದು ಹೇಳಿದ್ದರೂ ಅವರ ಒಂದು ಹೇಳಿಕೆಯ ವಿರುದ್ಧವಾಗಿ ಅಲ್ಲಿ ಪೋಲೀಸಿನವರು ನಡೆದುಕೊಂಡಿದ್ದಾರೆ. ನನಗೆ ತಿಳಿದ ಮಟ್ಟಿಗೆ ಆಲ್ಲಿ ವೈಯಕ್ತಿಕವಾಗಿ ನಾನು ಒಬ್ಬರ ಮೇಲೆಯೇ ಮಾತನಾಡುತ್ತಿದ್ದೇನೆ ಎಂಬುದಾಗಿ ಯಾರೂ ತಿಳಿಯಬಾರದು. ಪೋಲೀಸ್ ಅಧಿಕಾರಿಗಳು ಈಗ ಯಾರು ಇದ್ದಾರೆ ಅವರು ಟ್ರಿಗ್ಗರ್ ಹ್ಯಾಪಿ ಅಂತಾರಲ್ಲ ಹಾಗೆ ಲಾಠಿ ಹ್ಯಾಪಿ ಪರ್ಸನಾಲಿಟಿಯ ಹಾಗೆ ಇದ್ದಾರೆ. ಆ ಫ್ಯಾಕ್ಟರಿಯಲ್ಲಿರುವ ಒಬ್ಬ ಮನುಷ್ಯ ಇದಕ್ಕೆಲ್ಲಾ ಕಾರಣಕರ್ತನಾಗಿದ್ದಾನೆ. ಒಬ್ಬ ಪೋಲೀಸ್ ಅಧಿಕಾರಿಯೂ ಕಾರಣ ಕರ್ತರಾಗಿದ್ದಾನೆ. ಆದ್ದರಿಂದ ಅಂತಹವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಹಿಂದೆ ಎನ್.ಜಿ.ಇ.ಎಫ್. ಬಗ್ಗೆ ಆ ಪೋಲೀಸ್ ಅಧಿಕಾರಿ ಯಾವ ವರ್ತನೆ ಮಾಡಿದ್ದನೋ ಅದೇ

(ಶ್ರೀ ಎಂ. ಎಸ್. ಕೃಷ್ಣನ್)

ವರ್ತನೆಯನ್ನು ಮತ್ತೆ ಈಗ ಈ ರೂಬಿ ರಬ್ಬರ್ ಕೆಲಸಗಾರರ ಬಗ್ಗೆಯೂ ಮಾಡಿದ್ದಾನೆ. ಇಂಥ ತಪ್ಪಿತಸ್ಥರನ್ನು ಸರ್ಕಾರದವರು ಕೂಡಲೆ ಡಿಸ್‌ಮಿಸ್ ಮಾಡಬೇಕೆಂದು ಹೇಳುತ್ತೇನೆ. ಅವರು ಯಾರು ಎನ್ನುವುದಕ್ಕೆ ಬಗ್ಗೆ ಅವರ ಹೆಸರನ್ನು ಹೇಳುವುದಕ್ಕೂ ಕೂಡ ನಾನು ಸಿದ್ಧವಾಗಿದ್ದೇನೆ. ಇದು ಅತಿ ಮುಖ್ಯವಾದ ಹಾಗೂ ಅತಿ ಜರೂರಾದ ವಿಷಯ. ಸರ್ಕಾರದವರು ಅತಿ ಜರೂರಾಗಿ ಇದರ ಬಗ್ಗೆ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು. ಆದ್ದರಿಂದ ಇದರ ಬಗ್ಗೆ ಕೆಲವು ಮಾತುಗಳನ್ನಾಡುವುದಕ್ಕೆ ಅಧ್ಯಕ್ಷರು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ತಾವು ಹೇಳುತ್ತಿರುವಹಾಗೆ ಇದು ಕೇವಲ ಒಂದು ಅಡ್ಜರ್ನ್‌ಮೆಂಟ್ ಮೋಷನ್ ತಂದು ಬಗೆಹರಿಸತಕ್ಕಂಥ ಸಮಸ್ಯೆಯಲ್ಲ. ಮಾನ್ಯ ಸದಸ್ಯರು ಅದಕ್ಕೆ ಸಂಬಂಧಪಟ್ಟ ವಿಷಯಗಳೇನು ಎಂಬುದನ್ನೆಲ್ಲಾ ತಿಳಿಸಲಿ. ಅನಂತರ ನಾನೂ ತತ್ಸಂಬಂಧದಲ್ಲಿ ವಿಚಾರ ವಿನಿಮಯ ಮಾಡಿ ಯಾರು ತಪ್ಪಿತಸ್ಥರು ಎಂಬುದನ್ನು ಕಂಡುಹಿಡಿದು ತಪ್ಪಿತಸ್ಥರನ್ನು ಅವರು ಯಾರೇ ಆಗಿರಲಿ ಶಿಕ್ಷೆ ಮಾಡೋಣ. ಆದನ್ನು ಮಾಡದೆ ನುಮ್ಮನೆ ಏನೂ ವಿಷಯಗಳು ಗೊತ್ತಿಲ್ಲದೆ ಇದ್ದಾಗ ನನಗೆ ಅದರ ಬಗ್ಗೆ ಏನು ಹೇಳುವುದಕ್ಕೂ ಬರುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೆ ಎನ್.ಜಿ.ಇ.ಎಫ್. ವಿಚಾರದಲ್ಲಿ ಮಾನ್ಯ ನಚಿವರು ಇದೇ ಸಭೆಯಲ್ಲಿ ಪೋಲೀಸರ ಒಂದು ವರದಿಯನ್ನು ಓದಿದರು. ವಿಚಾರವೇನು ಎಂಬುದನ್ನು ಕೂಲಂಕಷವಾಗಿ ತಿಳಿದುಕೊಂಡು ತಪ್ಪಿತಸ್ಥರಿಗೆ ಶಿಕ್ಷೆ ಮಾಡಲಲ್ಲ. ಹಾಗೆ ಇದರಲ್ಲೂ ಆಗಬಾರದು.

ಶ್ರೀ ಡಿ. ದೇವರಾಜ ಅರಸ್.—ಈಗ ಮಾನ್ಯ ಸದಸ್ಯರಾದರೂ ಅವರಿಗೆ ಯಾರೋ ಬಂದು ಹೇಳಿದ ಸುದ್ದಿಯ ಮೇಲೆ ಅವರಿಲ್ಲಿ ಮಾತನಾಡುತ್ತಿದ್ದಾರೆ. ಮಾನ್ಯ ಸದಸ್ಯರಿಗೆ ಆ ಕಾರ್ಮಿಕರು ತಂದು ಕೊಡತಕ್ಕ ಸುದ್ದಿಯನ್ನು ನಂಬುವುಕ್ಕಾಗದೆ ಇರುತ್ತದೆಯೇ? ಹಾಗೇ ಸರ್ಕಾರಕ್ಕೂ ಕೂಡ ಆ ಅಧಿಕಾರಿಗಳು ತಂದು ಕೊಡತಕ್ಕ ವಿಷಯಗಳನ್ನು ಅವರೂ ಕೂಡ ನಂಬಲೇ ಬೇಕಾಗುವುದು. ಈ ದಿವಸ ಕೇರಳ ರಾಜ್ಯದಲ್ಲಿ ಮಾನ್ಯ ಸದಸ್ಯರ ಪಕ್ಷ ಅಡಳಿತವನ್ನು ನಡೆಸುತ್ತಿದೆ. ಅವರ ಸರ್ಕಾರ ಅಲ್ಲದೆ. ಅವರಾದರೂ ಇಂಥ ವಿಷಯಗಳಲ್ಲಿ ಹೇಗೆ ನಡೆಯಬೇಕು ಅನ್ನುವುದಕ್ಕೆ ಒಂದು ಮಾದರಿಯನ್ನು ಹಾಕಿಕೊಟ್ಟಿದ್ದರೆ ಅದರಂತೆ ನಾವೂ ನಹಾ ಇಲ್ಲಿ ನಡೆಯಬಹುದಾಗಿತ್ತು. ಆದರೆ ಮಾನ್ಯ ಸದಸ್ಯರು ಇಲ್ಲಿ ಹೇಳಿರತಕ್ಕ ವಿಷಯಗಳನ್ನು ನಾವು ಬ್ರಷ್ ಅಸೈಡ್ ಮಾಡಬೇಕೆಂಬ ಉದ್ದೇಶ ನಮಗಿಲ್ಲ. ಎಲ್ಲ ವಿಚಾರಗಳನ್ನೂ ಆಳವಾಗಿ ವಿಚಾರಮಾಡಿ ನೋಡೋಣ ಅಂತ ನಾನು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಇದೇ ಸಂದರ್ಭದಲ್ಲಿ ನಾನು ಒಂದು ಮಹತ್ವವಾದ ವಿಷಯವನ್ನು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಆ ವಿಚಾರ ಈ ದಿವಸದ ಕನ್ನಡ ಪ್ರಭಾ ಮತ್ತು ಎಕ್ಸ್‌ಪ್ರೆಸ್ ದಿನ ಪತ್ರಿಕೆಗಳಲ್ಲಿ ವರದಿಯಾಗಿದೆ. ಅದೇನೆಂದರೆ.....

MADAM SPEAKER.—This is purely an administrative matter and a question of law and order. I do not think I can allow this adjournment motion.

Raising the issue of the Mysore-Maharashtra Border

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಸ್ಪೀಪಿ.....

ಶ್ರೀ ಎಚ್. ಪುಟ್ಟಸ್ವಾಮಿ (ನಾತನೂರು).—ಅಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರಿದೆ. ಈಗ ಮಾತನಾಡುವುದಕ್ಕೆ ಎದ್ದುನಿಂತಿರತಕ್ಕ ಶ್ರೀ ವಾಟಾಳ್ ಅವರು ಒಂದೊಂದು ದಿನ ಒಂದೊಂದು ಕಡೆಯಲ್ಲಿ ನಿಂತು ಮಾತನಾಡುತ್ತಿದ್ದಾರೆ. ಇದು ನಿಯಮಾವಳಿಗೆ ವಿರುದ್ಧವಾಗಿದೆ.

ಅಧ್ಯಕ್ಷರು.—ಆಫೀಸಿನಿಂದ ಜಾಗವನ್ನು ಸದಸ್ಯರುಗಳಿಗೆ ಇನ್ನೂ ನಿಗದಿ ಮಾಡಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಮಹಾರಾಷ್ಟ್ರ ಮತ್ತು ಮೈಸೂರು ರಾಜ್ಯಗಳ ಗಡಿ ವಿವಾದದ ಸಮಸ್ಯೆ ಈಗಾಗಲೇ ಈ ಸಭೆಯ ಮುಂದೆ ಮಹಾಜನ್ ವರದಿ ಚರ್ಚೆಗೆ ಬಂದಾಗ ವಿಮರ್ಶೆಯಾಗಿ ಆಗಲೇ ತೀರ್ಮಾನವಾಗಿದೆ. ಹಾಗಿದ್ದರೂ ಕೂಡ ಮತ್ತೆ ಈ ವಿಚಾರವನ್ನು ಮೈಸೂರಿನ ಮುಖ್ಯ ಮಂತ್ರಿಗಳೂ ಮತ್ತು ಮಹಾರಾಷ್ಟ್ರ ಮುಖ್ಯ ಮಂತ್ರಿಗಳೂ ಅದರ ತೀರ್ಮಾನವನ್ನು ಸಂಪೂರ್ಣವಾಗಿ